ಕರ್ನಾಟಕ ಸರ್ಕಾರ

ಉದ್ಯೋಗ ಮತ್ತು ತರಬೇತಿ ಇಲಾಖೆ

<u>ವಿಶ್ವವಿದ್ಯಾನಿಲಯ ಉದ್ಯೋಗ **ಮಾಹಿತಿ** ಮತ್ತು **ಮಾರ್ಗದರ್ಶನ** ಕೇಂದ್ರ, **ಮಂಗಳಗಂಗೋತ್ರಿ**</u>

# 'ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು- ಸಿವಿಲ್ ನ್ಯಾಯಾಧೀಶರ ಹುದ್ದೆಗೆ ನೇರ ನೇಮಕಾತಿಗಳ ಪ್ರಕಟಣೆ'

ಕರ್ನಾಟಕ ನ್ಯಾಯಿಕ ಸೇವಾ(ನೇಮಕಾತಿ) ನಿಯಮಗಳು, 2004 ಮತ್ತು 2011, 2015 ಮತ್ತು 2016ರ ತಿದ್ದುಪಡಿ ನಿಯಮಗಳ ಅಡಿಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು, ಪ್ರಸ್ತುತ ಇರುವ ಹಾಗೂ ಬ್ಯಾಕ್ ಲಾಗ್ ಹುದ್ದೆಗಳೂ ಸೇರಿದಂತೆ ಸಿವಿಲ್ ನ್ಯಾದೀಶರ 57 ಹುದ್ದೆಗಳಿಗೆ ಅರ್ಹ ಅಬ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ವೆಬ್ಸೈಟ್ ವಿಳಾಸಗಳಾದ **<u>https://karnatakajudiciary.kar.nic.in/recruitment.php</u>** ಗಳಲ್ಲಿ ಅಧಿಸೂಚನೆ ಮತ್ತು ಅರ್ಜಿ ನಮೂನೆಗಳನ್ನು ಡೌನ್ಲೋಡ್ ಮಾಡಿಕೊಂಡು ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ಆನ್ಲೈನ್‌ಲ್ಲಿ ಸಲ್ಲಿಸಲು **10.04.2023** ಕೊನೆಯ ದಿನಾಂಕವಾಗಿರುತ್ತವೆ.

**ನೇಮಕಾತಿ ವಿಧಾನ:** ಉಚ್ಚ ನ್ಯಾಯಾಲಯವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ (ಮುಖ್ಯ ಲಿಖಿತ ಹಾಗೂ ಮೌಖಿಕ) ಪಡೆದ ಅಂಕಗಳ ಆಧಾರದ ಮೇಲೆ ನೇರ ನೇಮಕಾತಿ ಮಾಡಲಾಗುತ್ತದೆ.

**ಹುದ್ದೆಗಳ ಸಂಖ್ಯೆ:** 57

**ವಿದ್ಯಾರ್ಹತೆ:** ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯವು ನೀಡಿದ ಕಾನೂನು ಪದವಿಯನ್ನು ಹೊಂದಿರಬೇಕು ಮತ್ತು ಕಡ್ಡಾಯವಾಗಿ ವಕೀಲರಾಗಿ ನೋಂದಣಿ ಆಗಿರಬೇಕು.

ವಯೋಮಿತಿ: 35 ವರ್ಷಗಳು, ಪ.ಜಾ., ಪ.ಪಂ.- 38 ವರ್ಷಗಳು

**ವೇತನ ಶ್ರೇಣಿ:** Rs.77840/- – 136520/-

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **0824-2287696** ಅಥವಾ ಉಪಮುಖ್ಯಸ್ಥರು, ವಿಶ್ವವಿದ್ಯಾನಿಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರ, ಮಂಗಳಗಂಗೋತ್ರಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

21/3/23

(ಎಸ್.ಜೆ.ಹೇಮಚಂದ್ರ)

ಉಪಮುಖ್ಯಸ್ಥರು

ವಿಶ್ವವಿದ್ಯಾನಿಲಯ ಉದ್ಯೋಗ ಮಾಹಿತಿ ಮತ್ತು
ಮಾರ್ಗದರ್ಶನ ಕೇಂದ್ರ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ-574 199

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೫<br>Part – V | ಬೆಂಗಳೂರು, ಗುರುವಾರ, ೦೯, ಮಾರ್ಚ್, ೨೦೨೩(ಫಾಲ್ಗುಣ, ೧೮, ಶಕವರ್ಷ, ೧೯೪೪)<br>BENGALURU, THURSDAY, 09, MARCH, 2023(PHALGUNA, 18, SHAKAVARSHA, 1944) | ನಂ. ೯೯<br>No.99 |
|---|---|---|


## ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

## ಅಧಿಸೂಚನೆ

## ಸಂಖ್ಯೆ : ಹೆಚ್‌ಸಿಆರ್‌ಬಿ/ಸಿಜೆಆರ್–1/2023 ದಿನಾಂಕ: 09ನೇ ಮಾರ್ಚ್ 2023

## ಸಿವಿಲ್ ನ್ಯಾಯಾಧೀಶರ ಹುದ್ದೆಗೆ ನೇರ ನೇಮಕಾತಿ

## ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10ನೇ ಏಪ್ರಿಲ್ 2023

**ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) ನಿಯಮಗಳು, 2004 ಮತ್ತು 2011, 2015 ಮತ್ತು 2016ರ ತಿದ್ದುಪಡಿ ನಿಯಮಗಳ** ಅಡಿಯಲ್ಲಿ **ಕರ್ನಾಟಕ ಉಚ್ಚ ನ್ಯಾಯಾಲಯವು,** ಪ್ರಸ್ತುತ ಇರುವ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳೂ ಸೇರಿದಂತೆ ಸಿವಿಲ್ ನ್ಯಾಯಾಧೀಶರ **57** ಹುದ್ದೆಗಳಿಗೆ ನೇರ ನೇಮಕಾತಿಗಾಗಿ **ಆನ್‌ಲೈನ್ ಮೂಲಕ ಅರ್ಜಿಗಳನ್ನು** ಆಹ್ವಾನಿಸಲಾಗಿದೆಯೆಂದು ಈ ಮೂಲಕ ಅಧಿಸೂಚಿಸಿದೆ.

**1. <u>ಕನಿಷ್ಠ ವಿದ್ಯಾರ್ಹತೆ ಮತ್ತು ವಯೋಮಿತಿ :</u>**

**ಎ. ನೇರ ನೇಮಕಾತಿ :**

(ಎ) ಭಾರತದಲ್ಲಿನ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯವು ನೀಡಿದ ಕಾನೂನು ಪದವಿಯನ್ನು ಹೊಂದಿರಬೇಕು ಮತ್ತು ಕಡ್ಡಾಯವಾಗಿ ವಕೀಲರಾಗಿ ನೋಂದಣಿ ಆಗಿರಬೇಕು.

(ಬಿ) ಅಭ್ಯರ್ಥಿಗಳ ವಯಸ್ಸು, ಅರ್ಜಿಗಳನ್ನು ಸಲ್ಲಿಸುವುದಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕದಂದು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳ ಸಂದರ್ಭದಲ್ಲಿ **38 ವರ್ಷ** ವಯಸ್ಸು ಮತ್ತು ಇತರರ ಸಂದರ್ಭದಲ್ಲಿ **35 ವರ್ಷ** ವಯಸ್ಸು ಮೀರಿರಬಾರದು.

(ಸಿ) ಮಾಜಿ–ಸೈನಿಕ ಅಭ್ಯರ್ಥಿಗಳಿಗಾಗಿ, ಗರಿಷ್ಠ ವಯೋಮಿತಿಯಲ್ಲಿ **ಮೂರು ವರ್ಷಗಳ** ಸಡಿಲಿಕೆ ಇರುತ್ತದೆ.

**ಬಿ. ಸೇವಾ ನಿರತ ಅಭ್ಯರ್ಥಿಗಳ ನೇಮಕಾತಿ (ಉಚ್ಚ ನ್ಯಾಯಾಲಯ, ಜಿಲ್ಲಾ ನ್ಯಾಯಿಕ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಮತ್ತು ಪ್ರಾಸಿಕ್ಯೂಷನ್ಸ್ ಮತ್ತು ಸರ್ಕಾರಿ ವ್ಯಾಜ್ಯ ನಿರ್ವಹಣೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಸರ್ಕಾರಿ ಪ್ರಾಸಿಕ್ಯೂಟರ್– ಹಾಗೂ –ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳು) :**